**HRC**: 2/2025

**ಪಿ.ಡಬ್ಲ್ಯೂ-1**

**ದಿಃ 21–01–2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಎದುರುದಾರರ ಪರ ಶ್ರೀ SGG ವಕೀಲರಿಂದ**

4. ಎದುರುದಾರರನ್ನು ಈ ಅರ್ಜಿಯಲ್ಲಿ ಹೇಳಿರುವ ಸ್ವತ್ತಿನಲ್ಲಿ ಬಾಡಿಗೆದಾರರಾಗಿರುವ ಮೊದಲು ಸದರಿ ಸ್ವತ್ತನ್ನು ಬೇರೆ ಯಾರಿಗೂ ಬಾಡಿಗೆಗೆ ಕೊಟ್ಟಿರಲಿಲ್ಲ ಎಂದರೆ ಸರಿ. ಎದುರುದಾರರು ಸದರಿ ಸ್ವತ್ತಿನಲ್ಲಿ ಯಾವ ರಿಪೇರಿಗಳನ್ನು ಮಾಡಿರುತ್ತಾರೆ ಎಂದು ನಾನು ಚೌಕಾಶಿ ಮಾಡಿರುವುದಿಲ್ಲ. ಎದುರುದಾರರು ಸದರಿ ಸ್ವತ್ತನ್ನು ರಿಪೇರಿ ಮಾಡಲು ಎಷ್ಟು ಖರ್ಚನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ರಿಪೇರಿಯನ್ನು ಮಾಡುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯಲ್ಲಿ ಹೇಳಿರುವ ಸ್ವತ್ತಿಗೂ ನನ್ನ ಮನೆಗೂ ಸುಮಾರು 100 ಅಡಿ ಅಂತರ ಇರುತ್ತದೆ. ಸದರಿ ಅರ್ಜಿಯ ಸ್ವತ್ತಿಗೆ ಹೋಗಿ ಬರುವ ಜನರು ನನ್ನ ಮನೆಯಿಂದ ಕಾಣಿಸುತ್ತಾರೆ ಎಂದರೆ ಸರಿ. ಎದುರುದಾರರು ರಿಪೇರಿ ಕೆಲಸವನ್ನು ಎಷ್ಟು ಅವಧಿ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಿಪೇರಿಯ ಕೆಲಸವನ್ನು ಎದುರುದಾರರು ಮಾಡಿದನ್ನು ನಾನು ನೋಡಿದ ನಂತರ ಸದರಿಯವರಿಗೆ ನಾನು ಯಾವುದೇ ಲೀಗಲ್ ನೋಟೀಸನ್ನು ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ತಕರಾರನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರು ಸದರಿ ರಿಪೇರಿಯ ಬಾಬ್ತು ಎಷ್ಟು ಹಣ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅವರು ಅರ್ಜಿಯಲ್ಲಿ ಹೇಳಿರುವ ಸ್ವತ್ತಿಗೆ ಹೋಗಲು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ಸದರಿ ರಿಪೇರಿಯ ಕೆಲಸವನ್ನು ಮಾಡಿದ ಬಗ್ಗೆ ನಾನು ಪೋಲೀಸರಿಗೆ ದೂರನ್ನು ನೀಡಿರುವುದಿಲ್ಲ. ನನ್ನ ಅನುಮತಿ ಇಲ್ಲದೇ ಎದುರುದಾರರು ಸದರಿ ಸ್ವತ್ತಿನ ರಿಪೇರಿಯ ಕೆಲಸವನ್ನು ಮಾಡಿರುತ್ತಾರೆ ಎಂದು ಹೇಳಿದ್ದು, ಎದುರುದಾರರು ನನ್ನ ಸಮ್ಮತಿಯಿಂದ ಸದರಿ ಕೆಲಸವನ್ನು ಮಾಡಿದ್ದು, ನನಗೆ ಸದರಿ ಕೆಲಸದ ಖರ್ಚನ್ನು ಕೊಡಬೇಕಾಗುತ್ತದೆ ಎಂದು ನಾನು ನ್ಯಾಯಾಲಯದ

ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರು ಮಾಡಿರುವ ಸ್ವತ್ತಿನ ರಿಪೇರಿಯ ಕೆಲಸದ ಬಗ್ಗೆ ಯಾವುದೇ ಇಂಜನಿಯರ್ ರವರಿಂದ ಬಿಲ್ಲನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಎದುರುದಾರರು ಯಾವ ರಿಪೇರಿಯ ಕೆಲಸವನ್ನು ಮನೆಯೊಳಗೆ ಮಾಡಿರುತ್ತಾರೆ ಎಂದು ಗೊತ್ತಿರಲಿಲ್ಲ, ಹೊರಗಡೆ ಟೈಲ್ಸ್ ಗಳನ್ನು ಹಾಕಿರುವ ಬಗ್ಗೆ ಮಾತ್ರ ಗೊತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಕೆಲಸದ ಬಗ್ಗೆ ತಿಳಿದ ನಂತರ ಮನೆಯನ್ನು ವೀಕ್ಷಿಸಲು ನಾನು ಎದುರುದಾರರ ಬಳಿ ಕೇಳಿರುತ್ತೇನೆ, ಸದರಿಯವರು ನಿರಾಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದರಿ ವಿಷಯವನ್ನು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ನನ್ನ ಖರ್ಚಿನಲ್ಲಿ ಸದರಿ ಸ್ವತ್ತಿಗೆ ವಿದ್ಯುತ್ ಸಂಪರ್ಕವನ್ನು ಅಳವಡಿಸಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಾಜರು ಪಡಿಸಬಹುದು ಎಂದು ನುಡಿಯುತ್ತಾರೆ.

5. ನನಗೆ ಬಿಪಿ, ಡಯಾಬಿಟಿಸ್ ಹಾಗೂ ಹೃದಯದ ತೊಂದರೆಗಳು ಇರುತ್ತವೆ ಎಂದು ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಸದರಿ ಖಾಯಿಲೆಗಳು ವಯಸ್ಸಾದವರಿಗೆ ಸಾಮಾನ್ಯವಾಗಿ ಇರುತ್ತದೆ ಎಂದರೆ ಸರಿ. ಸದರಿ ಖಾಯಿಲೆಗಳನ್ನು ಔಷಧಿಯ ಮೂಲಕ ನಿಯಂತ್ರಿಸಬಹುದು ಎಂದರೆ ಸರಿ. ನಾನು ನನ್ನ ಮನೆಯಲ್ಲಿ ನನ್ನ ಗಂಡ ತೀರಿದ ನಂತರ ಸುಮಾರು 13 ವರ್ಷಗಳಿಂದ ಒಬ್ಬಳೇ ವಾಸವಾಗಿರುತ್ತೇನೆ. ನನ್ನ ಗಂಡ ತೀರಿಕೊಂಡ ನಂತರ ನಾನು ಈವರೆಗೂ ನನ್ನನ್ನು ನೋಡಿಕೊಳ್ಳಲು ಯಾರುಾ ಮನೆ ಕೆಲಸದವರನ್ನು ನೇಮಿಸಿರಲಿಲ್ಲ ಎಂದರೆ ಸರಿ. ಹೈಪೋಗ್ಲೈಸೀಮಿಯಾ ಯಾವುದೇ ಖಾಯಿಲೆ ಆಗದೇ, ಸಾಮಾನ್ಯವಾಗಿ ಡಯಾಬಿಟಿಸ್ ಇದ್ದವರು ಹೆಚ್ಚು ಅವಧಿ ಊಟವನ್ನು ತೆಗೆದುಕೊಳ್ಳದಿದ್ದರೆ, ಆ ಸ್ಥಿತಿಗೆ ಹೈಪೋಗ್ಲೈಸೀಮಿಯಾ ಆಗಿರುತ್ತದೆ ಎಂದರೆ ಸಾಕ್ಷಿಯು ಅದು ವಯಸ್ಸಿನ ಖಾಯಿಲೆ

ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ:6 ವೈದ್ಯಕೀಯ ಪ್ರಮಾಣ ಪತ್ರವನ್ನು ನನ್ನ ಕೋರಿಕೆಯ ಮೇರೆಗೆ ವೈದ್ಯರು ನೀಡಿರುತ್ತಾರೆ ಎಂದರೆ ಸರಿ. ನಾನು ನನ್ನ ಖಾಯಿಲೆಗಳಿಗೆ ಸಂಬಂಧಿಸಿ ಹಾಜರು ಪಡಿಸಿದ ದಾಖಲೆಗಳು, ಯಾವುದೇ ಜೀವ ತೆಗೆದುಕೊಳ್ಳುವ ಖಾಯಿಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಕಾರನ್ನು ಚಲಾಯಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿ. ನಾನು ನನ್ನ ಕಾರನ್ನು ಚಲಾಯಿಸಲು ಈವರೆಗೂ ಯಾವುದೇ ಚಾಲಕನನ್ನು ನೇಮಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ನೆರೆಕೆರೆಯವರು ಬೇಕಾದಾಗ ಬಂದು ಸಹಾಯ ಮಾಡುತ್ತಾರೆ ಎಂದು ನುಡಿಯುತ್ತಾರೆ. ನನ್ನ ಕೈಗೆ ಫ್ರಾಕ್ಚರ್ ಡಿಸೆಂಬರ್ 2024 ರಲ್ಲಿ ಆಗಿರುತ್ತದೆ. ಸದರಿ ಸಮಯದಲ್ಲಿಯೂ ನಾನು ಯಾವುದೇ ನರ್ಸ್ ನ್ನು ನನ್ನನ್ನು ನೋಡಿಕೊಳ್ಳಲು ನೇಮಿಸಿರಲಿಲ್ಲ ಎಂದರೆ ಸಾಕ್ಷಿಯು ನಾನು ನನ್ನ ತಂಗಿಯೊಂದಿಗೆ ವಾಸವಾಗಿದ್ದೆ ಎಂದು ನುಡಿಯುತ್ತಾರೆ. ನನಗೆ ಯಾವುದೇ ದೊಡ್ಡ ಖಾಯಿಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಖಾಯಿಲೆಗಳು ಇಲ್ಲದೇ ನಾನು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ.

6. ಎದುರುದಾರರು ಮಾಡಿದ ಮನೆ ರಿಪೇರಿಯ ಖರ್ಚನ್ನು ನೀಡಬೇಕೆಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ನಾನು ಸದರಿ ಖರ್ಚನ್ನು ನೀಡಿದರೆ, ಅವರು ಈ ಅರ್ಜಿಯಲ್ಲಿ ಹೇಳಿರುವ ಸ್ವತ್ತನ್ನು ಬಿಟ್ಟುಕೊಡಲು ತಯಾರು ಇರುತ್ತಾರೆ ಎಂದರೆ ಸಾಕ್ಷಿಯು ಸದರಿ ಸ್ವತ್ತು ಚೆನ್ನಾಗಿ ಇತ್ತು, ರಿಪೇರಿ ಮಾಡುವ ಅವಶ್ಯಕತೆ ಇಲ್ಲದಿದ್ದರಿಂದ, ನನಗೆ ಅದರ ಖರ್ಚನ್ನು ನೀಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಎದುರುದಾರರನ್ನು ಅರ್ಜಿ ಸ್ವತ್ತಿನಿಂದ ಬಲವಂತವಾಗಿ ಖಾಲಿ ಮಾಡಲು ಹೇಳಿದ್ದರಿಂದ, ಸದರಿಯವರು ಅಸಲು ದಾವಾ ಸಂಖ್ಯೆ 1044/2024 ನ್ನು ನನ್ನ ವಿರುದ್ಧ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು 11 ತಿಂಗಳು ಮುಗಿದಿತ್ತು ಎಂದು ನುಡಿಯುತ್ತಾರೆ.

**HRC**: 2/2025

**ಪಿ.ಡಬ್ಲ್ಯೂ-1**

ಸದರಿ ದಾವೆಯನ್ನು ನನ್ನ ವಿರುದ್ಧ ದಾಖಲಿಸಿದ ನಂತರ ನಾನು ಎದುರುದಾರರ ವಿರುದ್ಧ ದ್ವೇಷದಿಂದ ಈ ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅರ್ಜಿಯ ಸ್ವತ್ತು ಬೇಕಾಗಿರುವುದಿಲ್ಲ ಹಾಗೂ ಈ ಅರ್ಜಿಯಲ್ಲಿ ನಾನು ಹೇಳಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**